# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-3491/2015/ಡಿಆರ್ಇ-5, ದಿನಾಂಕ: 18-04-2017.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ-3491/2015/ಡಿಆರ್ಇ-5, ದಿನಾಂಕ: 31-03-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 31-03-2017 ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಬಿ ಎಲ್ ಹರ್ಷ ಬಿನ್ ಲೇಟ್ ಲೋಕನಾಥ, ಬೈರಮಂಗಲ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) (1) ಶ್ರೀ ಕೆ ರಘುರಾಮನ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಕೆ, ವಿಶೇಷ ಉಪವಿಭಾಗ, ರಾಮನಗರ. (2) ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ್ದಾರೆ.

**ದೂರಿನ ಸಂಕ್ಷಿಪ್ತ ವಿವರಣೆ:**

ರಾಮನಗರ ತಾಲ್ಲೂಕಿನ ಬೈರಮಂಗಲ ಗ್ರಾಮದಲ್ಲಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಖಾನೇಷುಮಾರಿ ನಂ: 613/29/ಎ/7 ಪೂರ್ವ ಪಶ್ಚಿಮ 48 ಅಡಿ, ಉ-ದ 53 ಅಡಿ ವಿಸದತೀರ್ಣದ ಆಸ್ತಿಯನ್ನು ನಾನು ಮತ್ತು ನನ್ನ ಸಹೋದರ ಬಿ.ಎಲ್.ಬೋಗೇಶ್ ಖರೀದಿ ಮಾಡಿದ್ದೇವೆ. ಈಗ ಲೋಕೊಪಯೋಗಿ ಇಲಾಖೆಯವರು ರಸ್ತೆ ನಿರ್ಮಿಸಲು ಹೊರಟಿದ್ದು, ಎದುರುದಾರರನ್ನು ಕೇಳಿದಾಗ ಕರ್ತವ್ಯಕ್ಕೆ ಅಡ್ಡಿಪಡಿಸಿದರೆ ಕ್ರಿಮಿನಲ್ ಕೇಸು ಹಾಕುವುದಾಗಿ ಹೆದರಿಸಿದರು. ಆದ್ದರಿಂದ ಕ್ರಮ ತೆಗೆದುಕೊಳ್ಳಲು ಕೋರಿದ್ದಾರೆ.

1ನೇ ಎದುರುದಾರರು ಆಕ್ಷೇಪಣೆಯಲ್ಲಿ ಸಲ್ಲಿಸಿ ಚತುಶ್ ಪತರಸ್ತೆಯನ್ನು ಬಿ.ಎಂ.ರಸ್ತೆ ಜಂಕ್ಷನ್‌ನಿಂದ ಕಂಚುಗಾರನಹಳ್ಳಿಯವರೆಗೆ ನಿರ್ಮಿಸಲಾಗುತ್ತಿದೆ. ಈ ರಸ್ತೆ ಬೈರಮಂಗಲ್ ಗ್ರಾಮದ ರಸ್ತೆಯಿಂದ ಹಾದು ಹೋಗುತ್ತದೆ. ದೂರುದಾರರು ಪುನಃ ಪುನಃ ಟಡ್ಡಿಪಡಿಸಿದ್ದರಿಂದ ಪಂಚಾಯತಿಯಲ್ಲಿ ವಿಚಾರಣೆ ಮಾಡಿದಾಗ ಬಿಡದಿ ಯಿಂದ ಹಾರೋಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಯಾವುದೇ ಖಾಸಗಿಯವರ ಆಸ್ತಿ ಇಲ್ಲ ಮತ್ತು ಇದು ಗ್ರಾಮ ಠಾಣಾದಲ್ಲಿ ಬರುವುದಿಲ್ಲ ಅಂತ ಪ್ರಮಾಣ ಪತ್ರ ಕೊಟ್ಟರು. ಆದ್ದರಿಂದ ರಸ್ತೆ ಕಾರ್ಯ ಮುಂದುವರೆಯುತ್ತದೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ಪಿಡಿಓ ರವರು ಲಂಚಕೋರ ಅಧಿಕಾರಿಯಾಗಿದ್ದಾರೆ. ನನಗೆ ಕೊಟ್ಟಿರುವ ಪ್ರಮಾಣ ಪತ್ರದಲ್ಲಿ ನಮ್ಮ ಆಸ್ತಿಯು ಬಿಡದಿ ಯಿಂದ ಹಾರೋಹಳ್ಳಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಇದೆ ಅಂತ ಪ್ರಮಾಣ ಪತ್ರ ಕೊಟ್ಟಿದ್ದರೆ ಎಂದು ತಿಳಿಸಿ ಸದರಿ ಪ್ರಮಾಣ ಪತ್ರ ಹಾಜರುಪಡಿಸಿದ್ದಾರೆ.

ಆದ್ದರಿಂದ ಪಿಡಿಓ ಗ್ರಾಮ ಪಂಚಾಯತಿ ಬೈರಮಂಗಲ ಇವರನ್ನು 2ನೇ ಎದುರುದಾರರನ್ನಾಗಿ ಸೇರಿಸಿಕೊಳ್ಳಲಾಯಿತು. ದೂರುದಾರರಿಗೂ ಸಹ ಅ.ದಾವೆ ಸಂ: 164/2015 ರಲ್ಲಿ ನಡೆಯುತ್ತೀರುವ ದಾವೆಯ ಬಗ್ಗೆ ವಿವರಣೆಗಳನ್ನು ಕೊಡಲು ಸೂಚಿಸಲಾಗಿತ್ತು. 2ನೇ ಎದುರುದಾರರು ತಮ್ಮ ತಕರಾರುಗಳನ್ನು ಸಲ್ಲಿಸಿದ್ದು, ಪುನಃ ಬೈರಮಂಗಲ ಗ್ರಾಮದ ಖಾತೆ ನಂ:613/29ಎ/7 ರ ಸ್ವತ್ತು ಬಿ.ನಂಜಪ್ಪ ಇವರಿಗೆ ಹೊಸದಾಗಿ ನಮೂದಿಸಿ ನಂಜಮ್ಮ

ಇವರಿಗೆ ಪೌತಿ ಸಬೂಬು ಖಾತೆ ಬದಲಾವಣೆಯಾಗಿದೆ. ಕ್ರಯ ಪತ್ರಗಳಂತೆ ಬಿ.ಎಲ್.ಬೋಗೇಶ್ ಮತ್ತು ಬಿ.ಎಲ್.ಹರ್ಷ ಇವರ ಹೆಸರಿಗೆ ಖಾತೆ ದಾಖಲು ಮಾಡಲಾಗಿದೆ. ಗ್ರಾಮ ಪಂಚಾಯ್ತಿ ಅಸೆಸ್‌ಮೆಂಟ್ ರಿಜಿಸ್ಟರನಲ್ಲಿ ನಮೂದು ಹಾಗೂ ಮ್ಯೂಟೇಷನ್ ಲಭ್ಯವಿರುವುದಿಲ್ಲ ಅಂತ ತಿಳಿಸಿದ್ದಾರೆ.

ದೂರುದಾರರ ಪ್ರಕಾರ ಈ ಆಸ್ತಿ ಖಾನೇಷುಮಾರಿ ಸಂಖ್ಯೆಯಾಗಿದ್ದು, ದೂರುದಾರರು ಅವುಗಳನ್ನು ಕ್ರಯಕ್ಕೆ ಪಡೆದುಕೊಂಡಿದ್ದಾರೆ. ಸದರಿ ಖಾನೇಷುಮಾರಿ ಸಂಖ್ಯೆಯನ್ನು ಸೇರಿಸಿಕೊಂಡು ರಸ್ತೆ ನಿರ್ಮಿಸಲು ಹೊರಟಿದ್ದರಿಂದ ದೂರುದಾರರು ಎ.ಇ.ಇ. ರಾಮನಗರ ಇವರನ್ನು ಎದುರುದಾರರನ್ನಾಗಿ ಮಾಡಿ ಅವರ ತಕರಾರು ಕೇಳಿಗಾದ ಎದುರುದಾರರು ದಿ:9–9–2015 ರ ಒಂದು ಪ್ರಮಾಣ ಪತ್ರವನ್ನು ಕೊಟ್ಟು ಸದರಿ ಜಾಗಕ್ಕೆ ಸಂಬಂಧಿಸಿದ ದಾಖಲೆಗಳು ಗ್ರಾಮ ಪಂಚಾಯತಿಯಲ್ಲಿ ಲಭ್ಯವಿಲ್ಲವೆಂದು ಎ.ಇ.ಇ. ರವರಿಗೆ ನೀರಾಕ್ಷೇಪಣಾ ಪತ್ರ ಕೊಟ್ಟಿದ್ದಾರೆ. ಆದರೆ ದೂರುದಾರರಿಗೆ ಅದೇ ಪಿಡಿಓ ರವರು ದಿ: 30.03.2016 ರ ದೃಢೀಕರಣ ಪತ್ರ ಕೊಟ್ಟು ಮೇಲ್ಕಂಡ ಸ್ವತ್ತು ಬಿಡದಿ-ಹಾರೋಹಳ್ಳಿ ರಸ್ತೆ ಬದಿಯಲ್ಲಿರುತ್ತದೆ ಎಂದು ದೃಢೀಕರಿಸಿದ್ದಾರೆ. ಒಂದೇ ಸ್ವತ್ತಿಗೆ ಸಂಬಂಧಿಸಿದಂತೆ ದೂರುದಾರರಿಗೆ ಒಂದು ಮತ್ತು 1 ನೇ ಎದುರುದಾರರಿಗೆ ಇನ್ನೊಂದು ದೃಢೀಕರಣ ಪತ್ರ ಕೋಟ್ಟು 2ನೇ ಎದುರುದಾರರಾದ ಕೆ.ಉಮೇಶ, ಪಿಡಿಓ ರವರು ಕರ್ತವ್ಯಲೋಪವೆಸಗಿದ್ದಾರೆ. ಅ.ದಾವೆ ಸಂ: 164/15 ನ್ನು ದೂರುದಾರರು ಎ.ಇ.ಇ ಲೋಕೋಪಯೋಗಿ ಇಲಾಖೆ ಇವರ ಇವರ ವಿರುದ್ಧ ಸಲ್ಲಿಸಿದ್ದಾರೆ. ಇದಲ್ಲದೆ ಸ.ದಾವೆ ನಂ:54/15 ಇದನ್ನು ಸಹ ಶಾಶ್ವತ ನಿರ್ಬಂಧಾಕಾಜ್ಞೆ ಸಲುವಾಗಿ ಸಲ್ಲಿಸಿದ್ದಾರೆ.

2 ನೇ ಎದುರುದಾರರ ವಿರುದ್ಧ 2 ಬೇರೆ ಬೇರೆ ರೀತಿಯ ಪ್ರಮಾಣ ಪತ್ರಗಳನ್ನು ದೂರುದಾರರಿಗೆ ಮತ್ತು 1ನೇ ಎದುರುದಾರರಿಗೆ ಒದಗಿಸಿರುವುದರಿಂದ 2ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆ.

ಆದ್ದರಿಂದ, ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ರವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)(i)(ii) ಮತ್ತು (iii) ರ ಅಡಿಯಲ್ಲಿ ದುರ್ನಡತೆ/ ದುರ್ವತನೆ ಕಂಡು ಬಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/385/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 17–05–2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 55 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
6) ಶ್ರೀ ಕೆ ಉಮೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈರಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
7) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.